ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಸಿದ್ದಾಪುರ

ಸಿ.ಸಿ. 596 /2020

| | |
|---|---|
| ಸಿ.ಡಬ್ಲ್ಯೂಃ | 5 |
| ಪಿ.ಡಬ್ಲ್ಯೂಃ | 10 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಮಚಂದ್ರ |
| ತಂದೆ ಹೆಸರು | ಃ | ಮಾದಾ |
| ವಯಸ್ಸು | ಃ | 75 ವರ್ಷ |
| ವೃತ್ತಿ | ಃ | ಕೂಲಿ |
| ವಾಸ | ಃ | ಖಂಡುಮನೆ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 23–07–2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಚಾಸಾ-1, 4, 6 ರಿಂದ 8 ರವರ ಪರಿಚಯ ಇರುವುದಿಲ್ಲ. ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ನಾನು ಯಾವುದೇ ಜಗಳವನ್ನು ನೋಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಜಗಳ ಆಗಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ**

ದಿಃ 16-07-2020 ರಂದು ನಾನು ಹಾಗೂ ಇತರರು ಚಾಸಾ-1 ರವರ ಗದ್ದೆಯ ಕೆಲಸಕ್ಕೆ ಹೋಗಿದ್ದು, ಅಲ್ಲಿ ನಾಟಿ ತಯಾರಿ ಮಾಡುವ ಸಮಯದಲ್ಲಿ ಆರೋಪಿತರು ಅಲ್ಲಿಗೆ ಬಂದು,

ಚಾಸಾ-1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ಅವರ ಕುತ್ತಿಗೆ ಹಿಡಿದು ದೂಡಿ, ಕೆಡವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ 8 ನೇ ಆರೋಪಿಯು ಚಾಸಾ-1 ರವರ ತಲೆಗೆ ಕತ್ತಿಯಿಂದ ಹೊಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿ3 ರಿಂದ 6 ರವರು ಚಾಸಾ-1 ರವರ ಎಡಕೈ ಹಾಗೂ ಬಲಗಾಲಿಗೆ ಹೊಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ಚಾಸಾ-4 ರವರು ಬಿಡಿಸಲು ಹೋದಾಗ 4 ಮತ್ತು 6 ನೇ ಆರೋಪಿತರು ಚಾಸಾ-4 ರವರಿಗೆ ಗುದ್ದಿದ್ದು, ಈ ಗಲಾಟೆ ಸಂದರ್ಬದಲ್ಲಿ ಅವರಿಗೂ ಸಹ ಗಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆಗ ಅಕ್ಕಪಕ್ಕದವರು ಸೇರಿಕೊಂಡು ಈ ಗಲಾಟೆಯನ್ನು ಬಿಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿತರೆಲ್ಲರೂ ಚಾಸಾ-1 ರವರಿಗೆ ಜೀವ ಬೆದರಿಕೆಯನ್ನು ಸಹ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಿಃ 17-07-2020 ರಂದು ಈ ಘಟನೆ ಸಂಬಂದ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ನೀಡಿಲ್ಲ ಎಂದು ಹೇಳಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ಅಭಿಯೊಜನೆ ಪರವಾಗಿ ನಿ.ಪಿ-18 ಎಂದು , ಅದರಲ್ಲಿರುವ ಆಯ್ದು ಭಾಗವನ್ನು ನಿ.ಪಿ-18(ಎ) ಎಂದು ಗುರುತಿಸಲಾಯಿತು.

ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**.

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಒ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**

**ಸಿದ್ದಾಪುರ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಸಿದ್ದಾಪುರ

ಸಿ.ಸಿ. 596 /2020

| | |
|---|---|
| ಸಿ.ಡಬ್ಲ್ಯೂ: | 2 |
| ಪಿ.ಡಬ್ಲ್ಯೂ: | 9 |

| | | |
|---|---|---|
| ಸಾಕ್ಷಿದಾರರ ಹೆಸರು | : | ಕನ್ನಾ ಪುಟ್ಯಾನಾಯ್ಕ |
| ತಂದೆ ಹೆಸರು | : | ಪುಟ್ಯಾನಾಯ್ಕ |
| ವಯಸ್ಸು | : | 61 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಕಳೂರು ಗ್ರಾಮ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 23-07-2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ಚಾಸಾ-1 ನನ್ನ ಅಕ್ಕನ ಮಗ ಇರುತ್ತಾನೆ. ಚಾಸಾ-3 ನನಗೆ ಪರಿಚಯ ಇರುತ್ತಾರೆ.

ದಿ: 07-07-2020 ರಂದು ಪೋಲೀಸರು ಪಂಚನಾಮೆ ಮಾಡುವ ಸಲುವಾಗಿ ಕುರುವಂತಿ ಗ್ರಾಮದ ಹತ್ತಿರ ಚಾಸಾ-1 ರವರ ಜಮೀನಿಗೆ ತಾಗಿ ಇರುವ ಜಂಗಲ್ ನ ಬಳಿ ಕರೆದಿರುತ್ತಾರೆ. ನಂತರ ನಾನು ಅಲ್ಲಿಗೆ ಹೋಗಿದ್ದು, ಪೋಲೀಸರು ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡು , ನಂತರ ಪೋಟೊಗಳನ್ನು ತೆಗೆದುಕೊಂಡಿರುತ್ತಾರೆ. ನಂತರ ಪೋಲೀಸರು ನನಗೆ ಕರೆದಾಗ ಬರಲು ಹೇಳಿರುತ್ತಾರೆ. ಚಾಸಾ-1 ರವರು ಅಲ್ಲಿ ಒಂದುಕತ್ತಿ ಹಾಗೂ ನಾಲ್ಕು ಬಡಿಗೆಗಳನ್ನು ಪೋಲೀಸರ ಮುಂದೆ ತೆಗೆದುಕೊಂಡು ಬಂದಿದ್ದು, ಅದನ್ನು ಪೋಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಪಂಚನಾಮೆಯನ್ನು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ಮಾಡಿರುತ್ತಾರೆ. ಪಂಚನಾಮೆ ಕಾಲದಲ್ಲಿ ನಾನು ಹಾಗೂ ಚಾಸಾ-3 ರವರು ಸಹ ಇದ್ದರು.

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಅದರಲ್ಲಿ ಇರುವ ಅವರ ಸಹಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು , ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಎರಡು ಫೋಟೊಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿಆ ದಿನ ಪೋಲೀಸರು ತೆಗೆದುಕೊಂಡು ಹೋದ ವಸ್ತುಗಳು ಇವುಗಳೇ ಎಂದು ನುಡಿಯುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 4 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ದೇವೇಂದ್ರ ನನ್ನ ಅಕ್ಕ ಮಗ ಇರುತ್ತಾನೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈದೇ ರೀತಿ ಪಂಚನಾಮೆ ಬರೆಯಿಸಬೇಕು ಎಂದು ನೀವೇನಾದರೂ ಹೇಳಿ ಬರೆಸಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಿದ ಸ್ಥಳದ ಜಂಗಲ್ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಅಕ್ಕಪಕ್ಕದಲ್ಲಿ ಎಷ್ಟು ಮನೆಗಳಿವೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು 10-12 ಮನೆಗಳು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ 10-12 ಮನೆಯವರು ಪಂಚನಾಮೆಗೆ ಬಂದಿರುತ್ತಾರೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಮು.ಮಾ-1 ರಿಂದ 4 ನ್ನು ಎಲ್ಲಿಂದ ತಂದರು ಎಂದು ನಿಮಗೆ ಗೊತ್ತಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಅಲ್ಲಿ ಎಷ್ಟು ಪಂಚನಾಮೆ ಮಾಡಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಒಂದು ಪಂಚನಾಮೆಗೆ ಮಾತ್ರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ದಿಃ 07-07-2020 ರಂದು ಯಾವ ವಾರ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 07-07-2020 ನ್ನು ಹೊರತು ಪಡಿಸಿ ನೀವು ಬೇರೇ ದಿನಾಂಕದಂದು ಪಂಚನಾಮೆಗೆ ಹೋಗಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಪಂಚನಾಮೆಗೆ ಸಹಿ ಮಾಡಲು ಹೇಳಿದ ಕಾರಣ ನೀವು ಸಹಿ ಮಾಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೋಲೀಸರು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪೋಲೀಸರು ಎಷ್ಟು ಸಹಿಗಳನ್ನು ತಮ್ಮ ಕಡೆಯಿಂದ ಪಡೆದುಕೊಂಡಿರುತ್ತಾರೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸ್ಥಳದಲ್ಲಿ ಪೋಲೀಸರು ಪಂಚನಾಮೆ ಮಾಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆಸರಿಯಲ್ಲ.ಚಾಸಾ-1 ರವರು ನನಗೆ ಸಂಬಂದಿಕರಾದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ದೇವೇಂದ್ರ

ರವರು ಮುದ್ದೆಮಾಲುಗಳನ್ನು ತಂದುಕೊಟ್ಟರು ಎನ್ನುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಸಾ.ಓ.ಹೇ.ಸ.ಓ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**

**ಸಿದ್ದಾಪುರ**